**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**
**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸ್ಪೆಷಲ್ ಕೇಸ ನಂಃ 26/2019
ಪಿಡಬ್ಲು : 8 ಸಿಡಬ್ಲು :8

ಸಾಕ್ಷಿಯ ಹೆಸರು : ಶ್ರೀ ಕೊಮ್ಮು ಕೃಷ್ಣಯ್ಯ
ತಂದೆಯ ಹೆಸರು : ಶ್ರೀ ಮೈಸಯ್ಯ
ವಯಸ್ಸು : 43 ವರ್ಷ
ಉದ್ಯೋಗ : ಕೂಲಿ ಕೆಲಸ
ವಾಸ್ತವ್ಯ : ಘಟ್ಟುತುಮ್ಮೆನ ಗ್ರಾಮ, ಬಲಮೂರು ಮಂಡಲಂ, ಜಿಲ್ಲೆಃ ನಾಗರ ಕರ್ನೂಲ, ರಾಜ್ಯಃ ತೆಲಂಗಾಣ
ದಿನಾಂಕ : 16-09-2025 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

[ಸಾಕ್ಷಿಗೆ ತೆಲಗು ಭಾಷೆ ಹೊರತುಪಡಿಸಿ ನ್ಯಾಯಾಲಯದ ಭಾಷೆಯಾದ ಕನ್ನಡ, ಆಂಗ್ಲ ಭಾಷೆ ತಿಳಿಯದೇ ಇರುವುದರಿಂದ ತೆಲಗು ಭಾಷೆಯನ್ನು ಚೆನ್ನಾಗಿ ಮಾತನಾಡಲು ಮತ್ತು ಬರೆಯಲು ಬಲ್ಲವರಾದಂತಹ ಶ್ರೀ.ಶ್ರೀನಾಥ ಹಣಮಂತ ಮದ್ರಾಸಿ, ಸಾಃ ಚಿಕ್ಕೋಡಿ ಇವರನ್ನು ಭಾಷಾಂತರಕಾರರಾಗಿ ತನಿಖಾ ಸಮಯದಲ್ಲಿ ಹಾಜರಿದ್ದು ಸಾಕ್ಷಿದಾರರ ಹೇಳಿಕೆಗಳನ್ನು ತರ್ಜುಮೆ ಮಾಡಿದವರಾಗಿರುತ್ತಾರೆ. ಅವರ ಸಹಾಯದಿಂದ ಸಾಕ್ಷಿಯ ಹೇಳಿಕೆಯನ್ನು ಪಡೆದುಕೊಳ್ಳಲಾಯಿತು. ಸದರಿಯವರಿಗೂ ಸಹ ಪ್ರಮಾಣ ವಚನ ಬೋಧಿಸಲಾಯಿತು.]

## <u>ಮುಖ್ಯ ವಿಚಾರಣೆ</u> : <u>ವಿಶೇಷ ಸರ್ಕಾರಿ ಅಭಿಯೋಜಕರಿಂದ</u>

ಚಾಸಾಃ 6 ಪ್ರಾಸಾಃ 7, ಚಾಸಾಃ 7 ಪೋಲುಮರು ನಾರಮ್ಮ ಪ್ರಾಸಾಃ7 ರವರ ಹೆಂಡತಿ. ಚಾಸಾಃ 9 ಮಹಮ್ಮದ ಸುಲ್ತಾನ, ಚಾಸಾಃ 10 ಪೋಲುಮುರು ಕೃಷ್ಣಯ್ಯ, ಚಾಸಾಃ 11 ಕರ್ರೇ ಸ್ವಾಮಿ, ಚಾಸಾಃ 12 ಕಟ್ಟರಾಜು ಲಿಂಗಸ್ವಾಮಿ , ಚಾಸಾಃ 13 ಕಟ್ಟರಾಜು ರಾಜು, ಚಾಸಾಃ 14 ಕಟ್ಟರಾಜು ಮಲ್ಲೇಶ, ಚಾಸಾಃ 15 ಮಡಪುಲ ನಿರಂಜನ, ಚಾಸಾಃ 16 ಮಡಪುಲ ರೇಣುಕಾ, ಚಾಸಾಃ 17 ಚಿಂತರಾಮಲು, ಚಾಸಾಃ 18 ಚಿಂತಲಕ್ಷ್ಮಮ್ಮ, ಚಾಸಾಃ 19 ಪರುಸ ಲಕ್ಷ್ಮಮ್ಮ, ಚಾಸಾಃ 20 ಕರ್ರೆ ಬಾಲಚಂದ್ರಿ, ಚಾಸಾಃ 21 ಕರ್ರೆ ಮಲ್ಲೇಶ್ವರಿ, ಚಾಸಾಃ 22 ಕಂಪಲಿ ರಮೇಶ, ಚಾಸಾಃ 23 ಕಂಪಲಿ ಅಂಜಲಿ, ಚಾಸಾಃ 25 ನಾಲಪೋತುಲ ಚೆನ್ನಯ್ಯ, ಚಾಸಾಃ 26 ನಿಮ್ಮಲದುರ್ಗ,

ಚಾಸಾಃ 27 ಗೊರ್ರೆಶಾಮು, ಚಾಸಾಃ 27 ಉಡ್ತನೂರು ಯಲ್ಲಮ್ಮ, ಚಾಸಾಃ 30 ಶಿವ, ಚಾಸಾಃ 31 ಅಂಜಲಿ, ಚಾಸಾಃ 32 ಉಡ್ತನೂರು ಲಿಂಗಸ್ವಾಮಿ, ಚಾಸಾಃ 33 ಮಾದಾಸು ಬಾಲಮನಿ, ಚಾಸಾಃ 34 ಗಂದಂ ಲಕ್ಷ್ಮಯ್ಯ , ಚಾಸಾಃ 35 ಚಿನ್ನಯ್ಯ, ಚಾಸಾಃ 36 ಯರ್ರಯ್ಯ ಇವರುಗಳು ನನಗೆ ಗೊತ್ತಿರುತ್ತಾರೆ. ನಾವೆಲ್ಲ ಒಟ್ಟಿಗೆ ಕೆಲಸಕ್ಕೆ ಹೋಗುತ್ತೇವೆ. ಚಾಸಾಃ 24 ರವರೂ ಸಹ ನನ್ನೊಂದಿಗೆ ಕೆಲಸಕ್ಕೆ ಬಂದಿದ್ದರು.

2. 1 ಮತ್ತು 2 ನೇ ಆರೋಪಿತರು ನನಗೆ ಗೊತ್ತಿರುತ್ತಾರೆ. ನಾವು ಕೆಲಸ ಮಾಡುತ್ತಿದ್ದ ಸ್ಥಳದಲ್ಲಿ ಮೇಸ್ತ್ರಿ ಆಗಿದ್ದರು. 3 ಮತ್ತು 4 ನೇ ಆರೋಪಿತರು ನನಗೆ ಪರಿಚಯ ಇರುತ್ತಾರೆ. 4 ಜನ ಆರೋಪಿತರು ನಮ್ಮನ್ನು ಅಚ್ಚಮಪೇಟೆಯ ತೋಟದ ಫಾರ್ಮ ಹೌಸನಲ್ಲಿ ಕೆಲಸಕ್ಕೆ ಕರೆದುಕೊಂಡು ಹೋಗಿದ್ದರು. ಅಲ್ಲಿ ನಾವು 8 ರಿಂದ 10 ದಿನ ಕೆಲಸ ಮಾಡಿದ್ದೇವೆ. ನಾವು 20-25 ಜನ ಅಲ್ಲಿ ಕೆಲಸಕ್ಕೆ ಹೋಗಿದ್ದೇವು. ನಾವು ಅಲ್ಲಿ ಕೆಲಸ ಮಾಡಲು ತಿಂಗಳಿಗೆ ರೂ.3,500/- ಹಣವನ್ನು ಕೊಡುತ್ತೇವೆ ಎಂದು ಹೇಳಿದ್ದರು. ನನಗೂ ಮತ್ತು ನನ್ನ ಹೆಂಡತಿಗೂ ಸೇರಿ ಒಂದು ವರ್ಷಕ್ಕೆ ಕೆಲಸ ಮಾಡಲು ರೂ.1,20,000/- ಹಣವನ್ನು ಆರೋಪಿತರು ನೀಡಿದ್ದರು.

3. ಅಲ್ಲಿಂದ ನಮ್ಮನ್ನು ಕೆಲಸಕ್ಕಾಗಿ ಚಿಕ್ಕೋಡಿಗೆ ಕರೆದುಕೊಂಡು ಬಂದರು. ಚಿಕ್ಕೋಡಿಯಲ್ಲಿ ರಸ್ತೆಯಲ್ಲಿದ್ದ ಹಳ್ಳಗಳನ್ನು ಮುಚ್ಚಲು, ರಸ್ತೆಯನ್ನು ಸ್ವಚ್ಚಗೊಳಿಸಲು ಮತ್ತು ರಸ್ತೆ ಅಗಲ ಮಾಡುವ ಕೆಲಸಕ್ಕೆ ಕರೆದುಕೊಂಡು ಬಂದಿದ್ದರು. ತಿಂಗಳಿಗೆ ರೂ.3,500/- ಹಣವನ್ನು ನೀಡುತ್ತೇವೆ ಎಂದು ಹೇಳಿ ನಮ್ಮನ್ನು ಕೆಲಸಕ್ಕೆ ಕರೆದುಕೊಂಡು ಬಂದಿದ್ದರು. ಚಿಕ್ಕೋಡಿಯಿಂದ 3 ಕಿಲೋಮೀಟರ ದೂರದಲ್ಲಿರುವ ಕಣಿವೆ ಮೇಲೆ ಇರುವ ಸಿಮೆಂಟ್ ಮತ್ತು ಡಾಂಬರ ಪ್ಲಾಂಟ ಹತ್ತಿರ ನಮಗೆ ಉಳಿದುಕೊಳ್ಳಲು ಟಿನ್ ಶೆಡ್‌ನ ಗುಡಿಸಲುಗಳನ್ನು ಹಾಕಿದ್ದರು.

4. ಬೆಳಗ್ಗೆ 6:00 ಗಂಟೆಯಿಂದ ಸಂಜೆ 6:30 ಗಂಟೆಯವರೆಗೆ ಕೆಲಸ ಮಾಡುತ್ತಿದ್ದೇವು. ಮಧ್ಯಾಹ್ನ 2:00 ಗಂಟೆಯಿಂದ 3:00 ಗಂಟೆಯವರೆಗೆ ಊಟದ ಸಮಯ ಇರುತ್ತಿತ್ತು. ನಿಮಗೆ ಊರಿಗೆ ಹೋಗಬೇಕಾದರೆ ರಜೆ ನೀಡುತ್ತಿದ್ದರು ಎನ್ನುವುದಕ್ಕೆ ಸಾಕ್ಷಿ ನಾನು ಕೇಳಿರುವುದಿಲ್ಲ ಹಾಗೂ ಊರಿಗೆ ಹೋಗಿರುವುದಿಲ್ಲ ಎಂದು ಹೇಳಿದ್ದಾರೆ. ನಿಮಗೆ ಆರೋಗ್ಯ ಸರಿ ಇಲ್ಲದೇ ಇದ್ದಾಗ ನಿಮಗೆ ಆರೋಪಿತರು ಔಷದೋಪಚಾರವನ್ನು ಮಾಡಿಸುತ್ತಿದ್ದರು ಎನ್ನುವುದಕ್ಕೆ ಸಾಕ್ಷಿ ಮೇಸ್ತ್ರಿ ಅವರು ಇದ್ದಾಗ ಅವರು ಕರೆದುಕೊಂಡು ಹೋಗಿ ತೋರಿಸುತ್ತಿದ್ದರು, ಅವರು ಇಲ್ಲದೇ ಇರುವಾಗ ಬೇರೆಯವರಿಗೆ ಆಸ್ಪತ್ರೆಗೆ ಕರೆದುಕೊಂಡು ಹೋಗವಂತೆ ಹೇಳಿ ಹೋಗುತ್ತಿದ್ದರು.

5. ಸಾಮಾನ್ಯವಾಗಿ ಕೆಲಸದ ಸಮಯದಲಿ ಸುಪರವೈಸರ ಅವರು ಹೊರಗೆ ಹೋಗಬಾರದು ಎಂದು ಹೇಳುತ್ತಿದ್ದರು. ಅವರ ಇಲ್ಲದ ಸಮಯದಲ್ಲಿ ನಾವು ಹೊರಗೆ ಹೋಗುತ್ತಿದ್ದೇವು. ದಿನದ ಕೆಲಸ ಮುಗಿದ ನಂತರ ನಾವು ಹೊರಗೆ ಓಡಾಡಿಕೊಂಡು ಬರುತ್ತಿದ್ದೇವು.

6. ನೀವು ಮಾಡಿದ ಕೆಲಸಕ್ಕೆ ಸರಿಯಾದ ಕೂಲಿ ಹಣವನ್ನು ಕೊಡುತ್ತಿದ್ದರು ಎನ್ನುವುದಕ್ಕೆ ಸಾಕ್ಷಿ ಅಚ್ಚಮಪೇಟೆಯಲ್ಲಿ ಕೆಲಸಕ್ಕೆ ಕರೆದುಕೊಂಡು ಹೋಗಿದ್ದಾಗೆ ನಮಗೆ ರೂ.1,20,000/- ಹಣ ಕೊಟ್ಟಿದ್ದರು. ನಂತರ ಅಲ್ಲಿಂದ ಚಿಕ್ಕೋಡಿಗೆ ಬಂದ ನಂತರ ನಾವು ಕೆಲಸಕ್ಕೆ ಹೋಗಲು ಗುಡಿಸಲಿನಲ್ಲಿದ್ದಾಗ ಕಾರ್ಮಿಕ ಇಲಾಖೆಯ ಅಧಿಕಾರಿಗಳು ಬಂದು ನಮ್ಮನ್ನು ಕರೆದುಕೊಂಡು ಹೋಗಿದ್ದಾರೆ ಎಂದು ಹೇಳಿದ್ದಾರೆ.

7. ಪೋಲಿಸರು ನಿಮ್ಮ ಹೇಳಿಕೆಯನ್ನು ತೆಗೆದುಕೊಂಡಿದ್ದಾರೆ ಎನ್ನುವುದಕ್ಕೆ ಸಾಕ್ಷಿ ಹೌದು ಎಂದು ಹೇಳಿದ್ದಾರೆ. ಪೋಲಿಸರು 3-4 ಸಾರಿ ನನ್ನ ಹೇಳಿಕೆಯನ್ನು ಪಡೆದುಕೊಂಡಿದ್ದಾರೆ.

**(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಸಾಕ್ಷಿಯು ಪ್ರತ್ಯಕ್ಷ ಸಾಕ್ಷಿಯಾಗಿದ್ದು ಪ್ರತಿಕೂಲವಾಗಿ ಸಾಕ್ಷಿ ನುಡಿದಿದ್ದರಿಂದ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು).**

**ಪಾಟೀ ಸವಾಲು: ವಿಶೇಷ ಸರ್ಕಾರಿ ಅಭಿಯೋಜಕರಿಂದ**

ದಿನಾಂಕಃ 12-11-2016 ರಂದು ನಾನು ಪೋಲಿಸರ ಮುಂದೆ ನೀಡಿದ ಹೇಳಿಕೆಯಲ್ಲಿ " ನಮಗೆ ಕೆಲಸಕ್ಕೆ ಹಚ್ಚಿ ಸರಿಯಾದ ವೇತನ ಕೊಡದೇ ನಮ್ಮಿಂದ ಕೆಲಸ ಮಾಡಿಸಿಕೊಂಡು ನಂತರ ನಮಗೆ ಮನೆಗಳಿಗೆ ಸಹ ಹೋಗಲು ಬಿಡದೇ ಮತ್ತು ನಮಗೆ ಬೇರೆ ಕಡೆಗೆ ಉದ್ಯೋಗಕ್ಕೆ ಹೋಗಲು ಹಾಗೂ ಮುಕ್ತವಾಗಿ ಸಂಚರಿಸುವ ಅಧಿಕಾರವನ್ನು ಕೂಡ ನಮ್ಮಿಂದ ಕಸಿದುಕೊಂಡು ತಮ್ಮ ಫಾರ್ಮ ಹೌಸನಲ್ಲಿಯೇ ಇರಿಸಿಕೊಂಡಿದ್ದರು " ಎಂದು ಹೇಳಿಕೆ ನೀಡಿದ್ದೇನೆ ಎನ್ನುವುದು ಸರಿಯಲ್ಲ. ಸಾಕ್ಷಿಯ ಹೇಳಿಕೆಯನ್ನು ನಿಪಿ-12 ಎಂದು ಗುರುತಿಸಲಾಯಿತು.

2. ಒಂದು ತಿಂಗಳಿಗೆ ರೂ.3,500/- ಹಣ ಕೊಡುವುದಾಗಿ ಮತ್ತು ಮುಂಗಡ ಹಣ ಕೊಡುವುದಾಗಿ ಆರೋಪಿತರು ನಮ್ಮಿಂದ ಪತ್ರವನ್ನು ಬರೆಸಿಕೊಂಡಿದ್ದರು. ಆರೋಪಿತರು ನಮಗೆ ಮುಂಗಡ ಹಣ ನೀಡಿರುವುದಿಲ್ಲ ಎನ್ನುವುದು ಸರಿಯಲ್ಲ. ತಿಂಗಳಿಗೆ ರೂ.3,500/- ಹಣ ನೀಡಿರುವುದಿಲ್ಲ ಎನ್ನುವುದಕ್ಕೆ ಮೊದಲು ಕೊಟ್ಟಿದ್ದಾರೆ ಎಂದು ಹೇಳಿದ್ದಾರೆ.

3. ದಿನಾಂಕಃ 12-11-2016 ರಂದು " ನಮ್ಮ ಕಾವಲಿಗಾಗಿ ಇಬ್ಬರು ಭದ್ರತಾ ಸಿಬ್ಬಂದಿಯವರನ್ನು ನೇಮಕ ಮಾಡಿದ್ದರು " ಎಂದು ಹೇಳಿಕೆ ನೀಡಿದ್ದೇನೆ ಎನ್ನುವುದು ಸರಿಯಲ್ಲ. ಸಾಕ್ಷಿಯ ಹೇಳಿಕೆಯ ಭಾಗವನ್ನು ನಿಪಿ-12 [ಎ] ಎಂದು ಗುರುತಿಸಲಾಯಿತು. " ನಮಗೆ ಆರೋಗ್ಯ ಸರಿ ಇಲ್ಲದೇ ಇದ್ದಾಗ ಯಾವುದೇ ಔಷದೋಪಚಾರ ಮಾಡುತ್ತಿರಲಿಲ್ಲ, ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಿರಲಿಲ್ಲ " ಎಂದು ಹೇಳಿಕೆ ನೀಡಿದ್ದೇನೆ ಎನ್ನುವುದು ಸರಿಯಲ್ಲ.ಸಾಕ್ಷಿಯ ಹೇಳಿಕೆಯ ಭಾಗವನ್ನು ನಿಪಿ-12 [ಬಿ] ಎಂದು ಗುರುತಿಸಲಾಯಿತು.

4. ನಮಗೆ ಹಣ ನೀಡದೇ ಕೆಲಸವನ್ನು ಮಾಡಿಸಿಕೊಂಡಿದ್ದಾರೆ ಎಂದು ಹೇಳಿಕೆ ನೀಡಿದ್ದೇನೆ ಎನ್ನುವುದು ಸರಿಯಲ್ಲ. ಆರೋಪಿತರು ನಮಗೆ ಹಣ ನೀಡಿದ್ದಾರೆ ಎಂದು ಹೇಳಿದ್ದಾರೆ. ನಿಪಿ-12, ನಿಪಿ-12 [ಎ] ಮತ್ತು ನಿಪಿ-12 [ಬಿ] ಪ್ರಕಾರ ನಾನು ಹೇಳಿಕೆ ನೀಡಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಪಾಟೀ ಸವಾಲು: ಶ್ರೀ. ಬಿ.ಜೆ.ಜಿ ವಕೀಲರಿಂದ ಆರೋಪಿತರ ಪರವಾಗಿ**

ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳುತ್ತಾರೆ .

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.